ಜೊಲ್ಲೆ ಗ್ರುಪ್

ವಾರ್ತಾ ಪತ್ರ

(ಖಾಸಗಿ ಸುತ್ತೋಲೆ ಸಲುವಾಗಿ ಮಾತ್ರ)

ಜೂನ 2025–ಸಂಪುಟ–9 ಸಂಚಿಕೆ–06


# ದರ್ಪಣ



## ಜೊಲ್ಲೆ ಗ್ರೂಪ್ ಸಂಸ್ಥೆಗಳ ವಾರ್ಷಿಕ ಸರ್ವಸಾಧಾರಣ ಸಭೆ

ಯಕ್ಸಂಬಾ ಸಿಬಿಎಸ್‌ಸಿ ಶಾಲೆಯ ಆವರಣದಲ್ಲಿ ಜರುಗಿದ ಜೊಲ್ಲೆ ಗ್ರೂಪ್ ಸಂಸ್ಥೆಗಳಾದ ಶ್ರೀ ಬೀರೇಶ್ವರ ಕೋ–ಆಪ್ ಕ್ರೆಡಿಟ್ ಸೊಸೈಟಿಯ 35ನೇ ವಾರ್ಷಿಕ ಸಭೆ, ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘದ 31, ಎಣ್ಣೆ ಬೀಜ ಬೆಳೆಗಾರರ ಸಹಕಾರಿ ಸಂಘದ 32ನೇ, ಜೊಲ್ಲೆ ಎಜ್ಯುಕೇಶನ್ ಸೊಸೈಟಿಯ 30ನೇ, ಯಕ್ಸಂಬಾ ಮಹಿಳಾ ಹಾಲು ಉತ್ಪಾದಕರ ಸಹಕಾರಿ ಸಂಘದ 18ನೇ, ಲೋಕ ಕಲ್ಯಾಣ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಸಂಘದ 14ನೇ, ಬಸವಜ್ಯೋತಿ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಶನ್ ಕೋ–ಆಪ್ ಸೊಸೈಟಿಯ 5 ನೆಯ ಹಾಗೂ ವಿವಿಧ ಅಂಗಸಂಸ್ಥೆಗಳ ವಾರ್ಷಿಕ ಸರ್ವಸಾಧಾರಣ ಸಭೆಯನ್ನು ನಡೆಸಲಾಯಿತು.

ಜೊಲ್ಲೆ ಗ್ರೂಪ್ ಸಂಸ್ಥಾಪಕರು ಮತ್ತು ಮಾಜಿ ಸಂಸದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಶಾಖೆಗಳನ್ನು ವಿಸ್ತರಿಸಿ ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡುವ ಮಹತ್ತರ ಕಾರ್ಯ ಮಾಡಲಾಗುತ್ತಿದೆ. ಗ್ರಾಮೀಣ ಭಾಗದ ಜನರ ಆರ್ಥಿಕ ಸ್ವಾವಲಂಬನೆ ಮತ್ತು ಅವರ ಆತ್ಮವಿಶ್ವಾಸ ಹೆಚ್ಚಿಸಿ ಸಹಕಾರ ಸಂಘದ ಸದುಪಯೋಗವನ್ನು ಜನರ ಮನೆ ಬಾಗಿಲಿಗೆ ಜೊಲ್ಲೆ ಗ್ರೂಪ್ ತೆಗೆದುಕೊಂಡು ಹೋಗಿದೆ. ಸಹಕಾರ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಜೊಲ್ಲೆ ಗ್ರೂಪ್ ಪ್ರಾಮಾಣಿಕ ಕೆಲಸ ಮಾಡುತ್ತಿದೆ. ಕಳೆದ 35 ವರ್ಷಗಳಿಂದ ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ಶ್ರೀ ಬೀರೇಶ್ವರ ಕೋ–ಆಪ್ ಕ್ರೆಡಿಟ್ ಸೊಸೈಟಿಯ ಶಾಖೆಗಳನ್ನು ಆರಂಭಿಸಿ ಸಹಕಾರಿ ರಂಗದಲ್ಲಿ ಹೊಸ ಅಧ್ಯಾಯ ಬರೆದಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ದೊರೆಯುವ ಎಲ್ಲ ಸೌಲಭ್ಯಗಳು ನಮ್ಮ ಸಹಕಾರಿ ಸಂಸ್ಥೆಯಲ್ಲಿ ದೊರೆಯುತ್ತಿವೆ. ಇದರಿಂದ ಗ್ರಾಹಕರ ನೆಚ್ಚಿನ ಸಹಕಾರಿ ಸಂಸ್ಥೆಯಾಗಿ ಹೊರಹೊಮ್ಮಿದೆ. ಸಂಸ್ಥೆಯು ಪ್ರಸಕ್ತ ವರ್ಷದಲ್ಲಿ 4.08 ಲಕ್ಷ ಸದಸ್ಯರನ್ನು ಹೊಂದಿದೆ. 4,338 ಕೋಟಿ ಠೇವು ಸಂಗ್ರಹ 3,313 ಕೋಟಿ ಸಾಲ, 45.35 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಾದ್ಯಂತ 226 ಶಾಖೆಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸಂಸ್ಥೆಯು ಇಷ್ಟೊಂದು ಬೆಳವಣಿಗೆ ಸಾಧಿಸಲು ಗ್ರಾಹಕರ ವಿಶ್ವಾಸ, ಆಡಳಿತ ಮಂಡಳಿ ಪ್ರೋತ್ಸಾಹ ಮತ್ತು ಸಿಬ್ಬಂದಿಗಳ ನಿರಂತರ ಪರಿಶ್ರಮ ಕಾರಣ ಎಂದರು.

ಯುವಧುರೀಣ, ಜೊಲ್ಲೆ ಗ್ರೂಪ್ ಉಪಾಧ್ಯಕ್ಷ ಶ್ರೀ ಬಸವಪ್ರಸಾದ ಜೊಲ್ಲೆ ಅವರು ಪಾಸ್ತಾವಿಕವಾಗಿ ಮಾತನಾಡುತ್ತ, ಜೊಲ್ಲೆ ಗ್ರೂಪ್ ಅಂಗಸಂಸ್ಥೆಗಳು ಕೇವಲ ಆರ್ಥಿಕಾಭಿವೃದ್ಧಿಯ ಸಂಸ್ಥೆಯಾಗದೇ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಕೃಷಿ ಚಟುವಟಿಕೆಗಳೊಂದಿಗೆ ನಾಡಿನ ಜನರ ವಿಶ್ವಾಸ ಗಳಿಸಿದ್ದು, ಸಂಸ್ಥಾಪಕ ಶ್ರೀ

### ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್)

ಕ್ರಿಯಾತ್ಮಕ ಹಾಗೂ ಪ್ರಗತಿಶೀಲ...



ಮೇ 31 2025ರ ಆರ್ಥಿಕ ಸ್ಥಿತಿ

- ಶಾಖೆಗಳು 226 (ಕರ್ನಾಟಕ ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಾದ್ಯಂತ)
- ಠೇವು 4396+ ಕೋಟಿ
- ಸಾಲ 3437+ ಕೋಟಿ
- ಸದಸ್ಯರು 4.13+ ಲಕ್ಷ
- ಗುಂತಾವಣೆ 1069+ ಕೋಟಿ
- ಲಾಭ 2024-25 45+ ಕೋಟಿ

ಅಣ್ಣಾಸಾಹೇಬ ಜೊಲ್ಲೆ ಹಾಗೂ ಸಹ ಸಂಸ್ಥಾಪಕಿ ಸೌ. ಶಶಿಕಲಾ ಜೊಲ್ಲೆ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿವೆ. ಸಹಕಾರ ರತ್ನ, ಮಾಜಿ ಸಂಸದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಅವರ ಜೀವನ ಹಾಗೂ ಸಾಧನೆಗಳ ಕುರಿತಾದ ಪುಸ್ತಕವನ್ನು ಬರುವ ವರ್ಷದಲ್ಲಿ ಬಿಡುಗಡೆಗೊಳಿಸಲಾಗುವುದು ಎಂದರು. ಮಹಾರಾಷ್ಟ್ರದ ಮಾಜಿ ಶಾಸಕ ಶ್ರೀ ದೀಪಕ ಪಾಟೀಲ, ಬೆಳಗಾವಿ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಶ್ರೀ ಅಪ್ಪಾಸಾಹೇಬ ಕುಲಗುಡೆ, ಲೇಖಕ ಶ್ರೀಸುಶಾಂತ ಗಾಂವಕರ, ಶ್ರೀ ಜಯಾನಂದ ಜಾಧವ ಮಾತನಾಡಿ, ಜೊಲ್ಲೆ ಗ್ರುಪ್ ಸಂಸ್ಥೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು.

ಶ್ರೀ ಬೀರೇಶ್ವರ ಹಾಗೂ ಜ್ಯೋತಿ ಸಹಕಾರಿ ಸಂಸ್ಥೆಗಳ ಉತ್ತಮ ಶಾಖೆಗಳಿಗೆ, ಜೊಲ್ಲೆ ಶಿಕ್ಷಣ ಸಂಸ್ಥೆಯ ಸಾಧಕ ವಿದ್ಯಾರ್ಥಿಗಳಿಗೆ, ನಿವೃತ್ತ ಶಿಕ್ಷಕರಿಗೆ, ಸಿಬ್ಬಂದಿಗೆ ಸನ್ಮಾನಿಸಲಾಯಿತು. ಅಕಾಲಿಕ ಮರಣ ಹೊಂದಿದ ಸಂಸ್ಥೆಯ ಗ್ರಾಹಕ, ಸದಸ್ಯರು, ಸಿಬ್ಬಂದಿ ವಾರಸುದಾರರಿಗೆ ಪರಿಹಾರ ಚೆಕ್ ಹಾಗೂ ನಿವೃತ್ತಿ ಹೊಂದಿದ ಸಿಬ್ಬಂದಿಗೆ ಪೆನ್‌ಶನ್ ಪತ್ರ ನೀಡಲಾಯಿತು.

ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆ ಅಧ್ಯಕ್ಷ ಶ್ರೀ ಜ್ಯೋತಿಪ್ರಸಾದ ಜೊಲ್ಲೆ, ಬೀರೇಶ್ವರ ಸಹಕಾರಿ ಸಂಸ್ಥೆಯ ಅಧ್ಯಕ್ಷ ಶ್ರೀ ಅಪ್ಪಾಸಾಹೇಬ ಜೊಲ್ಲೆ, ಉಪಾಧ್ಯಕ್ಷ ಶ್ರೀ ಆನಂದ ಪಾಟೀಲ, ಶ್ರೀ ದೀಪಕ ಸಾಳುಂಕೆ ಪಾಟೀಲ, ನಿರ್ದೇಶಕರಾದ ಶ್ರೀ ಸಿದ್ರಾಮ ಗಡದೆ, ಶ್ರೀ ಯಾಶೀನ ತಾಂಬೋಳೆ, ಶ್ರೀ ವಿಭಾವರಿ ದೀಲಿಪ ಖಾಂಡಕೆ, ಶ್ರೀ ಆನಂದ ದೇವಗೌಡ ಪಾಟೀಲ, ಶ್ರೀ ಅಣ್ಣಾಸಾಹೇಬ ಚೌಗಲಾ, ಶ್ರೀ ವೃಷಭ ಜೈನ್, ಶ್ರೀ ವಜ್ರಕಾಂತ ಸದಲಗೆ, ಶ್ರೀ ಪ್ರಕಾಶ ಪಾಟೀಲ, ಶ್ರೀ ನಿಂಗಪ್ಪ ಕೋಕಲೆ, ಶ್ರೀ ಕಾಶಿನಾಥ ಕಮತೆ, ಶ್ರೀ ದತ್ತಾತ್ರೇಯ ಪಾಟೀಲ, ಶ್ರೀ ಬಾಳಾಸಾಹೇಬ ಕದಮ, ಶ್ರೀ ಮಲ್ಲಿಕಾರ್ಜುನ ತೇಲಿ, ಶ್ರೀ ಸದಾನಂದ ಹಳಿಂಗಳಿ, ಶ್ರೀ ಜಯ ಪ್ರಕಾಶ ಸಾವಂತ, ಶ್ರೀ ಚೇತನ ದೇಶಪಾಂಡೆ, ಶ್ರೀ ಶ್ರೀನಿವಾಸ ಕರಾಳೆ, ಶ್ರೀ ಶ್ರೀಪಾದ ನೇರ್ಲಿಕರ, ಹಾಲ ಶುಗರ್ ಅಧ್ಯಕ್ಷ ಶ್ರೀ ಎಂ.ಪಿ.ಪಾಟೀಲ, ಉಪಾಧ್ಯಕ್ಷ ಶ್ರೀ ಪವನ ಪಾಟೀಲ, ಮತ್ತು ಪ್ರಧಾನ ವ್ಯವಸ್ಥಾಪಕ (I/C) ಶ್ರೀ ಬಿ.ಎ.ಗುರವ, ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ಎಂ.ಕೆ.ಮಂಗಾವತೆ, ಶ್ರೀ ಶಿವು ಡಬ್ಬನ್ನವರ, ಶ್ರೀ ಎಸ್.ಕೆ.ಮಾನೆ ಮುಂತಾದವರು ಉಪಸ್ಥಿತರಿದ್ದರು.

# ಜೊಲ್ಲೆ ಎಜ್ಯುಕೇಶನ್ ಸೊಸಾಯಟಿಯ ವಿವಿಧ ಅಂಗ ಸಂಸ್ಥೆಗಳ ಸಿಬ್ಬಂದಿ ವರ್ಗಕ್ಕೆ ವಾರ್ಷಿಕ ಸಿಬ್ಬಂದಿ ಸಭೆ ಮತ್ತು ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಾಗಾರ



ಅತ್ಯುತ್ತಮ ಶಾಲೆ – ಶಿವಶಂಕರ ಜೊಲ್ಲೆ ಇಂಗ್ಲೀಷ್ ಮಿಡಿಯಮ್ ಪಬ್ಲಿಕ್ ಶಾಲೆ, ನಿಪ್ಪಾಣಿ–ನಾಂಗನೂರ.



ಅತ್ಯುತ್ತಮ ಮಹಾವಿದ್ಯಾಲಯ – ಬಸವಜ್ಯೋತಿ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯ ನನದಿ.

ಜೊಲ್ಲೆ ಎಜ್ಯುಕೇಶನ್ ಸೊಸಾಯಟಿಯ, ವಿವಿಧ ಅಂಗ ಸಂಸ್ಥೆಗಳ ಸಿಬ್ಬಂದಿಗಳಿಗಾಗಿ ವಾರ್ಷಿಕ ಸಿಬ್ಬಂದಿ ಸಭೆ ಮತ್ತು ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಾಗಾರದ ಉದ್ಘಾಟನೆಯನ್ನು ನಿಪ್ಪಾಣಿ ಮತಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರು ಸೌ ಶಶಿಕಲಾ ಜೊಲ್ಲೆ ನೇರವೇರಿಸಿದರು. ಕಾರ್ಯಕ್ರಮದ ಕುರಿತು ಮಾತನಾಡುತ್ತ, ಇವತ್ತಿನ ದಿನಮಾನಗಳಲ್ಲಿ ಇಂತಹ ಸಿಬ್ಬಂದಿ ಸಭೆ ಮತ್ತು ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಾಗಾರ ಆಯೋಜನೆ ಅತ್ಯಂತ ಅವಶ್ಯಕವಾಗಿದೆ.

ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳನ್ನು ಸರ್ವಾಂಗೀಣ ಅಭಿವೃದ್ಧಿ ಮಾಡುವುದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ. ಶಿಕ್ಷಕರು ಸಮಯಪ್ರಜ್ಞೆ, ಪ್ರಾಮಾಣಿಕತೆ, ನಿಷ್ಠೆ ಇತ್ಯಾದಿ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಯಮಾಡಿದರೆ ಮಕ್ಕಳು ವೈಯಕ್ತಿಕವಾಗಿ ಶೈಕ್ಷಣಿಕ ಪ್ರಗತಿಯನ್ನು ಸಾಧಿಸುತ್ತಾರೆ ಮತ್ತು ಸಂಸ್ಥೆಯು ಕೂಡಾ ಬೆಳೆಯುತ್ತದೆ ಎಂದರು. ಈ ಸಂದರ್ಭದಲ್ಲಿ ಸಂಸ್ಥೆಯ ವಿವಿಧ ಅಂಗ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ವರ್ಗದ ವಿಶೇಷ ಕಾರ್ಯಗಳನ್ನು ಗುರುತಿಸಿ. ಅತ್ಯುತ್ತಮ ಮುಖ್ಯೋಪಾಧ್ಯಾಯ, ಅತ್ಯುತ್ತಮ ಶಿಕ್ಷಕ, ಅತ್ಯುತ್ತಮ ಉಪನ್ಯಾಸಕ, ಅತ್ಯುತ್ತಮ ಗುಮಾಸ್ತ, ಅತ್ಯುತ್ತಮ ಶಾಲೆ & ಅತ್ಯುತ್ತಮ ಕಾಲೇಜು ಹೀಗೆ ಆರು ಪುರಸ್ಕಾರಗಳನ್ನು ನೀಡಿ ಅಭಿನಂದಿಸಿದರು.

ಅದೇ ರೀತಿ ವ್ಯಕ್ತಿತ್ವ ವಿಕಸನ ಕಾರ್ಯಾಗಾರದ ತರಬೇತಿದಾರರಾಗಿ ಮರಾಠಾ ಮಂಡಳ ಇಂಜಿನಿಯರಿಂಗ್ ಕಾಲೇಜ ನಿರ್ದೇಶಕರಾದ ಡಾ॥ ಡಿ. ಜಿ. ಕುಲಕರ್ಣಿ ಆಗಮಿಸಿ, ಶಿಕ್ಷಕರಾದವರು ಮಕ್ಕಳಲ್ಲಿ ಅಡಗಿರುವ ಸೂಕ್ತವಾದ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಿ ಬೆಳಕಿಗೆ ತರುವ ಕೌಶಲ್ಯವನ್ನು ಹೊಂದಿರಬೇಕು. ಪ್ರತಿ ನಿತ್ಯ ಶಿಕ್ಷಕರಾದವರು ತಮ್ಮ ಅವಧಿಯಲ್ಲಿ ಯಾವುದಾದರು ಹೊಸ ವಿಷಯದ ಕುರಿತು ಕನಿಷ್ಠ 5 ನಿಮಿಷ ನೂತನ ವಿಷಯಗಳ ಕುರಿತು ಮಾಹಿತಿ ನೀಡಿಬೇಕು. ಶಿಕ್ಷಕರಾದವರು ಮಕ್ಕಳಿಗೆ ಸೋತು ಗೆದ್ದವರ, ಸಾಧಕರ ಕಥೆಗಳನ್ನು ಹೇಳಿ ಹುರಿದುಂಬಿಸಬೇಕು. ಪಾಲಕರ ಹಾಗೂ ಬದಲಾಗುತ್ತಿರುವ ಸಮಾಜದ ಬೇಡಿಕೆಗಳಿಗೆ ಅನುಗುಣವಾಗಿ ಮಕ್ಕಳನ್ನು ವಿದ್ಯಾಭ್ಯಾಸದಲ್ಲಿ ತಯಾರು ಮಾಡಬೇಕು ಎಂದರು. ಒಟ್ಟಿನಲ್ಲಿ ಶಿಕ್ಷಕರು ತಮ್ಮ ವೃತ್ತಿಯನ್ನು ಪ್ರೀತಿಸಿ ಜವಾಬ್ದಾರಿಯನ್ನು ಅರಿತು ಸಮಾಜ ಸುಧಾರಣೆಯಲ್ಲಿ ತಮ್ಮ ಮಹತ್ವದ ಪಾತ್ರ ಕುರಿತು ಅರಿವು ಹೊಂದಿರಬೇಕು ಎಂದು ವಿವಿಧ ವಿಷಯಗಳ ಮೇಲೆ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಜೊಲ್ಲೆ ಗ್ರುಪ್ ಸಂಸ್ಥಾಪಕರು ಶ್ರೀ ಅಣ್ಣಾಸಾಹೇಬ ಜೊಲ್ಲೆ, ಆಶಾಜ್ಯೋತಿ ವಿಶೇಷ ಮಕ್ಕಳ ಶಾಲೆಯ ಅಧ್ಯಕ್ಷರಾದ ಶ್ರೀ ಜ್ಯೋತಿಪ್ರಸಾದ ಜೊಲ್ಲೆ, ಕಾರ್ಯಕ್ರಮದ ಕುರಿತು ನೇತೃತ್ವ ವಹಿಸಿದ ಜೊಲ್ಲೆ ಗ್ರುಪ್ ಉಪಾಧ್ಯಕ್ಷರಾದ ಶ್ರೀ ಬಸವಪ್ರಸಾದ ಜೊಲ್ಲೆ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿವಿಧ ಅಂಗ ಸಂಸ್ಥೆಗಳ ಪ್ರಾಚಾರ್ಯರು ಹಾಗೂ ಸಿಬ್ಬಂದಿಯವರು ಪಾಲ್ಗೊಂಡಿದ್ದರು. ಸಂಯೋಜಕರಾದ ಶ್ರೀ ಎಂ ಎಂ ಪಾಟೀಲ ಸ್ವಾಗತಿಸಿದರು. ಶ್ರೀ ಮಿಥುನ ಅಂಕಲಿ ನಿರೂಪಿಸಿದರು.



ಶಿವಶಂಕರ ಜೊಲ್ಲೆ ಕನ್ನಡ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಯಕ್ಸಂಬಾ.
ಉತ್ತಮ ಮುಖ್ಯೋಪಾಧ್ಯಾಯರಾಗಿ ಆಯ್ಕೆಯಾದ ಶ್ರೀ ವೀರುಪಾಕ್ಷ ಭಿವಸೆ



ಬಸವಜ್ಯೋತಿ ಪದವಿ ಪೂರ್ವ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾ ವಿದ್ಯಾಲಯ, ನಣದಿ.
ಉತ್ತಮ ಉಪನ್ಯಾಸಕರಾಗಿ ಆಯ್ಕೆಯಾದ ಶ್ರೀ ರವಿ ಮಾನೆ



ಶಿವಶಂಕರ ಜೊಲ್ಲೆ ಇಂಗ್ಲೀಷ್ ಮಿಡಿಯಮ್ ಪಬ್ಲಿಕ್ ಶಾಲೆ, ನಣದಿ.
ಉತ್ತಮ ಶಿಕ್ಷಕರಾಗಿ ಶ್ರೀ ಆಕಾಶ ಮಾಯನ್ನವರ



ಶಿವಶಂಕರ ಜೊಲ್ಲೆ ಇಂಗ್ಲೀಷ್ ಮಿಡಿಯಮ್ ಪಬ್ಲಿಕ್ ಶಾಲೆ, ನಣದಿ.
ಉತ್ತಮ ಗುಮಾಸ್ತನಾಗಿ ಆಯ್ಕೆಯಾದ ಶ್ರೀ ಮಾರುತಿ ಶಿಂದೆ

# ವಿಶ್ವ ರೆಡ್ ಕ್ರಾಸ್ ದಿನ

ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನವನ್ನು ಪ್ರತಿ ವರ್ಷ ಮೇ 8 ರಂದು ಆಚರಿಸಲಾಗುತ್ತದೆ. ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಚಳವಳಿಯ ಅಡಿಯಲ್ಲಿ ಸೇವೆ ಸಲ್ಲಿಸುವ ಲಕ್ಷಾಂತರ ಸ್ವಯಂಸೇವಕರು ಮತ್ತು ಸಿಬ್ಬಂದಿಗಳ ಮಾನವೀಯ ಕಾರ್ಯವನ್ನು ಗೌರವಿಸಲು ಇದನ್ನು ಆಚರಿಸಲಾಗುತ್ತದೆ. ಈ ದಿನವು ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ (ICRC) ಸಂಸ್ಥಾಪಕ ಮತ್ತು ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪಡೆದ ಮೊದಲ ವ್ಯಕ್ತಿ ಹೆನ್ರಿ ಡ್ಯೂನಾಂಟ್ ಅವರ ಜನ್ಮದಿನವನ್ನು ಸೂಚಿಸುತ್ತದೆ.

ಈ ಜಾಗತಿಕ ಆಚರಣೆಯು ಯುದ್ಧ, ನೈಸರ್ಗಿಕ ವಿಕೋಪಗಳು, ಆರೋಗ್ಯ ತುರ್ತುಸ್ಥಿತಿಗಳು ಮತ್ತು ಇನ್ನೂ ಹೆಚ್ಚಿನ ಬಿಕ್ಕಟ್ಟುಗಳ ಸಂದರ್ಭದಲ್ಲಿ ದಯೆ, ಸ್ವಯಂಸೇವೆ ಮತ್ತು ಏಕತೆಯ ಶಕ್ತಿಯನ್ನು ನೆನಪಿಸುತ್ತದೆ. ಮಾನವೀಯತೆಗೆ ಸೇವೆ ಸಲ್ಲಿಸಲು ತಮ್ಮನ್ನು ತಾವು ಅರ್ಪಿಸಿಕೊಳ್ಳುವವರನ್ನು ಶ್ಲಾಘಿಸಲು ಮತ್ತು ಪ್ರಪಂಚದಾದ್ಯಂತ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್‌ನ ಮೌಲ್ಯಗಳು ಮತ್ತು ಚಟುವಟಿಕೆಗಳ ಬಗ್ಗೆ ಜಾಗೃತಿ ಮೂಡಿಸಲು ಇದು ಒಂದು ಕ್ಷಣವಾಗಿದೆ.

### ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನ 2025 ರ ಥೀಮ್

2025 ರ ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನದ ಅಧಿಕೃತ ಥೀಮ್ "ಮಾನವೀಯತೆಯನ್ನು ಜೀವಂತವಾಗಿರಿಸುವುದು". ಈ ಥೀಮ್ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಕಾರ್ಮಿಕರ ಅಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ, ಅವರು ಅಗತ್ಯವಿರುವ ಕಡೆ ಸಹಾಯ ಮಾಡುತ್ತಾರೆ. ಯುದ್ಧ ವಲಯಗಳಿಂದ ವಿಪತ್ತು ಪೀಡಿತ ಪ್ರದೇಶಗಳು ಮತ್ತು ನಿರಾಶ್ರಿತರ ಶಿಬಿರಗಳವರೆಗೆ, ಸ್ವಯಂಸೇವಕರು ಸಹಾನುಭೂತಿ ಮತ್ತು ತಟಸ್ಥತೆಯಿಂದ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತಾರೆ. ಸಂಘರ್ಷಗಳು, ಆರೋಗ್ಯ ಬಿಕ್ಕಟ್ಟುಗಳು ಮತ್ತು ಅಸಮಾನತೆ ಹೆಚ್ಚುತ್ತಿರುವ ಸಮಯದಲ್ಲಿ ಮಾನವೀಯ ತತ್ವಗಳನ್ನು ರಕ್ಷಿಸುವ ತುರ್ತು ಅಗತ್ಯವನ್ನು ಈ ಥೀಮ್ ಎತ್ತಿ ತೋರಿಸುತ್ತದೆ. "ಮಾನವೀಯತೆಯನ್ನು ಜೀವಂತವಾಗಿರಿಸುವುದು" ಎಂಬುದು ನೆಲದ ಮೇಲಿರುವವರಿಗೆ ಗೌರವ ಮತ್ತು ಕ್ರಿಯೆಯ ಮೂಲಕ ಶಾಂತಿ, ದಯೆ ಮತ್ತು ಭರವಸೆಯನ್ನು ಹರಡುವ ಮೂಲಕ ಅವರ ಕೆಲಸವನ್ನು ಬೆಂಬಲಿಸುವ ಕರೆಯಾಗಿದೆ.

### ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನದ ಇತಿಹಾಸ

ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನದ ಕಲ್ಪನೆಯನ್ನು 1948 ರಲ್ಲಿ ಅಧಿಕೃತವಾಗಿ ಸ್ಥಾಪಿಸಲಾಯಿತು, ಇದನ್ನು ಹೆನ್ರಿ ಡ್ಯೂನಾಂಟ್ ಅವರ ಜನ್ಮ ದಿನಾಂಕವಾದ ಮೇ 8 ರಂದು ಆಚರಿಸಲಾಯಿತು. 1859 ರಲ್ಲಿ ಸೋಲ್ಫೆರಿನೊ ಕದನದ ಭೀಕರತೆಯನ್ನು ಕಂಡ ನಂತರ ಡ್ಯೂನಾಂಟ್ ಅವರ ದೃಷ್ಟಿಕೋನವು ಹೊರಹೊಮ್ಮಿತು, ಇದು ಸ್ವಯಂಸೇವಾ ಪರಿಹಾರ ಸಂಸ್ಥೆಗಳ ಸ್ಥಾಪನೆಗೆ ಅವರನ್ನು ಸಮರ್ಥಿಸಲು ಕಾರಣವಾಯಿತು.

ಇದು ಅಂತಿಮವಾಗಿ 1863 ರಲ್ಲಿ ಅಂತರರಾಷ್ಟ್ರೀಯ ರೆಡ್ ಕ್ರಾಸ್ ಸಮಿತಿಯ ರಚನೆಗೆ ಮತ್ತು ಜಿನೀವಾ ಸಮಾವೇಶಗಳನ್ನು ಅಳವಡಿಸಿಕೊಳ್ಳಲು ಕಾರಣವಾಯಿತು. ಅವರ ಪರಂಪರೆಯು 192 ರಾಷ್ಟ್ರೀಯ ಸಮಾಜಗಳ ರಚನೆಗೆ ಸ್ಫೂರ್ತಿ ನೀಡಿದೆ, ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಚಳುವಳಿಯನ್ನು ಇಂದು ವಿಶ್ವದ ಅತಿದೊಡ್ಡ ಮಾನವೀಯ ಜಾಲವನ್ನಾಗಿ ಮಾಡಿದೆ.

### ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನದ ಮಹತ್ವ

ವಿಶ್ವ ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ದಿನವು ಇತರರ ಸೇವೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಲಕ್ಷಾಂತರ ಸ್ವಯಂಸೇವಕರಿಗೆ ಗೌರವವಾಗಿದೆ. ತುರ್ತು ಸಂದರ್ಭಗಳಲ್ಲಿ ಬಳಲುತ್ತಿರುವವರಿಗೆ ಸಹಾಯ ಮಾಡಲು ಈ ವ್ಯಕ್ತಿಗಳು ತಮ್ಮ ಸ್ವಂತ ಸುರಕ್ಷತೆಯನ್ನು ಪಣಕ್ಕಿಡುತ್ತಾರೆ. ಇದರ ಮಹತ್ವ ಇಲ್ಲಿದೆ.

**ಮನ್ನಣೆ:** ವಿಪತ್ತುಗಳು, ಸಂಘರ್ಷಗಳು ಮತ್ತು ಆರೋಗ್ಯ ತುರ್ತು ಪರಿಸ್ಥಿತಿಗಳಲ್ಲಿ ನೆರವು ನೀಡುವ ಸ್ವಯಂಸೇವಕರು ಮತ್ತು ಸಿಬ್ಬಂದಿಗಳ ನಿಸ್ವಾರ್ಥ ಕೊಡುಗೆಗಳನ್ನು ಶ್ಲಾಘಿಸುತ್ತದೆ.

**ಜಾಗೃತಿ:** ಚಳುವಳಿಯನ್ನು ಮಾರ್ಗದರ್ಶಿಸುವ ಮೂಲಭೂತ ತತ್ವಗಳ ಬಗ್ಗೆ ಸಾರ್ವಜನಿಕ ಪ್ರಜ್ಞೆಯನ್ನು ಮೂಡಿಸುತ್ತದೆ: ಮಾನವೀಯತೆ, ನಿಷ್ಪಕ್ಷಪಾತ, ತಟಸ್ಥತೆ, ಸ್ವಾತಂತ್ರ್ಯ, ಸ್ವಯಂಸೇವೆ, ಏಕತೆ ಮತ್ತು ಸಾರ್ವತ್ರಿಕತೆ.

**ಸ್ಫೂರ್ತಿ:** ವ್ಯಕ್ತಿಗಳು ಮಾನವೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಮತ್ತು ಸಹಾನುಭೂತಿ ಮತ್ತು ಸೇವೆಯ ಮೌಲ್ಯಗಳನ್ನು ಎತ್ತಿಹಿಡಿಯಲು ಪ್ರೋತ್ಸಾಹಿಸುತ್ತದೆ.

## ಶ್ರೀ ಜ್ಯೋತಿ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಯಕ್ಸಂಬಾ




| | |
|---|---|
| ಶಾಖೆಗಳು | 81 |
| ಠೇವು | 336+ ಕೋಟಿ |
| ಸಾಲ | 167+ ಕೋಟಿ |
| ಸದಸ್ಯರು | 44+ ಸಾವಿರ |
| ಗುಣಿತಾವನಿಗಳು | 127+ ಕೋಟಿ |
| ಲಾಭ 2024-25 | 01+ ಕೋಟಿ |




ನಿಪ್ಪಾಣಿ ನಗರದಲ್ಲಿ ದೇಶದ ಹಾಗೂ ಧರ್ಮದ ರಕ್ಷಣೆ ಸಲುವಾಗಿ ತನ್ನ ಪ್ರಾಣವನ್ನೆ ಬಲಿದಾನ ನೀಡಿದ ಮಹಾ ಪರಾಕ್ರಮಿ ಹಾಗೂ ಛತ್ರಪತಿ ಶಿವಾಜಿ ಮಹಾರಾಜರ ನಂತರ ಹಿಂದೂತ್ವದ ರಕ್ಷಣೆ ಮಾಡಿದ ಶ್ರೀ ಛತ್ರಪತಿ ಸಂಭಾಜಿ ಮಹಾರಾಜರ ಜಯಂತಿ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಲಾಯಿತು.




ಜೊಲ್ಲೆ ಎಜ್ಯುಕೇಶನ್ ಸೊಸೈಟಿಯ ಅಂಗ ಸಂಸ್ಥೆಯಾದ ಬಸವಜ್ಯೋತಿ ಸ್ನಾತಕ ಮತ್ತು ಸ್ನಾತಕೋತ್ತರ ಮಹಾವಿದ್ಯಾಲಯ, ಮೌಲಾನಾ ಅಬುಲ್ ಕಲಾಂ ಅಝಾದ ಬಿ.ಎಸ್.ಡಬ್ಲ್ಯೂ ಮತ್ತು ಎಮ್.ಎಸ್.ಡಬ್ಲ್ಯೂ ಮಹಾವಿದ್ಯಾಲಯ, ಸ್ವಾಮಿ ವಿವೇಕಾನಂದ ಬಿಸಿಎ ಮಹಾವಿದ್ಯಾಲಯದ ಸನ್ 2024-25 ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಅಂತಿಮ ವರ್ಷದ ವಿಧ್ಯಾರ್ಥಿಗಳ ಬೀಳ್ಕೊಡುವ ಸಮಾರಂಭವನ್ನು ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಚಾಲನೆ ನೀಡುತ್ತಿರುವುದು.




ನಿಪ್ಪಾಣಿ ಮತಕ್ಷೇತ್ರದ ಸೌಂದಲಗಾ ಗ್ರಾಮದ 3 ವರ್ಷಕೊಮ್ಮೆ ನಡೆಯುವ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಜಾತ್ರೆಯ ನಿಮಿತ್ಯ ಆಯೋಜಿಸಿದ ಭವ್ಯ ಎತ್ತಿನಗಾಡಿ ಹಾಗೂ ಕುದುರೆಗಾಡಿ ಹಾಗೂ ವಿವಿಧ ಶರ್ಯತ್ತು ಕಾರ್ಯಕ್ರಮಕ್ಕೆ ಶ್ರೀ ಬಸವಪ್ರಸಾದ ಜೊಲ್ಲೆಯವರು ಚಾಲನೆ ನೀಡಿದ ದೃಶ್ಯ.



**ಉದ್ಘಾಟನೆ**

ಹುಕ್ಕೇರಿ ತಾಲೂಕಿನ ಹರಗಾಪೂರ-ಗಡ ಗ್ರಾಮದಲ್ಲಿ ಜೊಲ್ಲೆ ಎಜುಕೇಶನ ಸೊಸೈಟಿಯ ಅಂಗ ಸಂಸ್ಥೆಯಾದ ಛತ್ರಪತಿ ಶಿವಾಜಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಾವಿದ್ಯಾಲಯ ನಿಪ್ಪಾಣಿ ವತಿಯಿಂದ ಆಯೋಜಿಸಿದ್ದ, 2025ನೇ ಸಾಲಿನ "ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ"ವನ್ನು ಜೊಲ್ಲೆ ದಂಪತಿ ಉದ್ಘಾಟಿಸುತ್ತಿರುವುದು.




**ಉದ್ಘಾಟನೆ**

ನಿಪ್ಪಾಣಿ ನಗರದಲ್ಲಿ ಪತಂಜಲಿ ಯೋಗ ಸಮಿತಿ ನಿಪ್ಪಾಣಿ ವತಿಯಿಂದ "ಅಡ್ವಾನ್ಸ್ ಯೋಗ ತರಬೇತಿ ಶಿಬಿರ"ವನ್ನು ಪತಂಜಲಿ ಯೋಗ ಪೀಠ, ಹರಿದ್ವಾರದ ಪ್ರಭಾರಿಗಳಾದ ಪೂಜ್ಯ ಶ್ರೀ ಸ್ವಾಮಿ ಪರಮಾರ್ಥ ದೇವ್ ಹಾಗೂ ನಿಪ್ಪಾಣಿಯ ಪ.ಪೂಜ್ಯ. ಶ್ರೀ ಪ್ರಾಣಲಿಂಗ ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಜೊಲ್ಲೆ ದಂಪತಿ ಶಿಬಿರವನ್ನು ಉದ್ಘಾಟಿಸುತ್ತಿರುವುದು.



**ಚೆಕ್ ವಿತರಣೆ**

ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ., ಸಂಕೇಶ್ವರ. 10 ಜನ ಸಿಬ್ಬಂದಿಗಳ ಗ್ರಾಚ್ಯೂಟಿ ಚೆಕ್‌ಗಳನ್ನು ಅವರ ಕುಟುಂಬದ ವಾರಸುದಾರರಿಗೆ ಜೊಲ್ಲೆ ದಂಪತಿ ಕಾರ್ಮಿಕ ದಿನಾಚರಣೆದಂದು ವಿತರಿಸುತ್ತಿರುವುದು.



**ಚಾಲನೆ ನೀಡುತ್ತಿರುವುದು**

ನಿಪ್ಪಾಣಿ ಮತಕ್ಷೇತ್ರದ ಬೋರಗಾಂವವಾಡಿ ಗ್ರಾಮದಲ್ಲಿ 70 ಲಕ್ಷ ರೂ. ಮೊತ್ತದಲ್ಲಿ ದೂಧಗಂಗಾ ನದಿಯಿಂದ "ಜಲಜ್ಯೋತಿ" ಏತ ನೀರಾವರಿ ಯೋಜನೆಗೆ ಜೊಲ್ಲೆ ಗ್ರೂಪ್ ಸಂಸ್ಥಾಪಕರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ ಹಾಗೂ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಸಸಿಗೆ ನೀರೆರೆಯುವ ಮೂಲಕ ಚಾಲನೆ ನೀಡುತ್ತಿರುವ ದೃಶ್ಯ.



**ಸತ್ಕಾರ**

ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಮುಖ್ಯ ಕಚೇರಿಗೆ ಶ್ರೀ ರೋಹಿತ ಗುಪ್ತಾ, ಪ್ರಧಾನ ವರದಿಗಾರರು. ಇಂಡಿಯನ್ ನ್ಯೂಸ ಪೋರ್ಟಲ್, ನವದೆಹಲಿ. ಅವರು ಸೌಹಾರ್ದಯುತವಾಗಿ ಭೇಟಿ ನೀಡಿದ ಸಂಧರ್ಭದಲ್ಲಿ ಅವರನ್ನು ಪ್ರಧಾನ ವ್ಯವಸ್ಥಾಪಕ(I/C) ಶ್ರೀ ಬಿ. ಎ. ಗುರವ ಸತ್ಕರಿಸುತ್ತಿರುವ ದೃಶ್ಯ.



**ಚಾಲನೆ ನೀಡುತ್ತಿರುವುದು**

ಭಿವಶಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಅನುಷ್ಠಾನಗೊಳಿಸಿರುವ ಸಂಚಾರಿ ಆರೋಗ್ಯ ಘಟಕ (ಮೊಬೈಲ್ ಮೆಡಿಕಲ್ ಯುನಿಟ್) ವಾಹನಕ್ಕೆ ನಿಪ್ಪಾಣಿ ಮತಕ್ಷೇತ್ರದ ಜನಪ್ರಿಯ ಶಾಸಕರಾದ ಸೌ. ಶಶಿಕಲಾ ಜೊಲ್ಲೆಯವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡುತ್ತಿರುವುದು.



**ಭೇಟಿ**

ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್)ನ ಮುಖ್ಯ ಕಚೇರಿಗೆ ಶ್ರೀಮತಿ. ಮಿನಾಕ್ಷೀ ಯಾದವ, ಡೆಪ್ಯೂಟಿ ಡೈರೆಕ್ಟರ, ಶ್ರೀ ಮುಕೇಶ ರಾಜ ಡೆಪ್ಯೂಟಿ ಡೈರೆಕ್ಟರ, NCDC ನವದೆಹಲಿ ಹಾಗೂ ಶ್ರೀ ಹರಿಪ್ರಸಾದ ಜಿ, ಅಸಿಸ್ಟಂಟ್ ಡೈರೆಕ್ಟರ, NCDC ರಿಜಿನಲ್ ಅಫೀಸ, ಬೆಂಗಳೂರು. ಸೌಹಾರ್ದಯುತವಾಗಿ ಬೇಟಿ ನೀಡಿ ಚರ್ಚಿಸುತ್ತಿರುವ ದೃಶ್ಯ.



**ಸತ್ಕಾರ**

ಶ್ರೀ ಬೀರೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಟಿ ಲಿ., ಯಕ್ಸಂಬಾ (ಮಲ್ಟಿ-ಸ್ಟೇಟ್) ಮುಖ್ಯ ಕಚೇರಿಗೆ ಡಾ. ಅಶೋಕ ದಳವಾಯಿ, ನಿವೃತ್ತ IAS ಅಧಿಕಾರಿಗಳು. ಸೌಹಾರ್ದಯುತವಾಗಿ ಭೇಟಿ ನೀಡಿದ ಸಂಧರ್ಭದಲ್ಲಿ ಶ್ರೀ ಬೀರೇಶ್ವರ ಸಂಸ್ಥೆಯ ಅಧ್ಯಕ್ಷ ಶ್ರೀ ಅಪ್ಪಾಸಾಹೇಬ ಜೊಲ್ಲೆಯವರು ಸತ್ಕರಿಸುತ್ತಿರುವ ದೃಶ್ಯ.

ಜೊಲ್ಲೆ ಗ್ರುಪ್ ರಾಣಿ ಚನ್ನಮ್ಮಾ ವೃತ್ತ, ಯಕ್ಸಂಬಾ ತಾ. ಚಿಕ್ಕೋಡಿ ಜಿ. ಬೆಳಗಾವಿ- 591244 Ph : 9844469288 / 7760983792 E-mail : darpanjus6@gmail.com